MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 6-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರದ ದರ 5 ವಾರಗಳ ಗರಿಷ್ಠ ಮಟ್ಟಕ್ಕೆ

ಮಲೇಶಿಯಾದ ಉತ್ಪಾದನೆ ಇಳಿಕೆ ಹಾಗೂ ಇಂಡೋನೇಶಿಯಾದ ರಫ್ತು ಇಳಿಕೆಯ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 1.94 ಶೇಕಡಾ ಹೆಚ್ಚಳವಾಗಿ ಟನ್‌ಗೆ 4255 ರಿಂಗಿಟ್ಸ್ ($ 966.61) ಕ್ಕೇರಿಕೆಯಾಗಿತ್ತು. ಮಲೇಶಿಯಾದ ಡಿಸೆಂಬರ್ ಉತ್ಪಾದನೆ ನವೆಂಬರ್‌ಗಿಂತ 1.68 ಶೇಕಡಾ ಇಳಿಕೆಯಾಗಬಹುದೆಂದು ಮಲೇಶಿಯಾದ ದಕ್ಷಿಣ ದ್ವೀಪಾರ್ಧದ ಮಿಲ್ ಸಂಘಟನೆ ಅಂದಾಜಿಸಿದೆಯೆನ್ನಲಾಗಿದೆ. ಮಲೇಶಿಯಾದ ಡಿಸೆಂಬರ್ 2022 ರ ಪಾಮೆಣ್ಣೆ ರಫ್ತು 1.7 ರಿಂದ 2.8 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಭಾರತದ ಡಿಸೆಂಬರ್ 2022 ರ ಪಾಮೆಣ್ಣೆ ಆಮದು ಹಿಂದಿನ ವರ್ಷದ ಡಿಸೆಂಬರ್‌ನಲ್ಲಿದ್ದುದರಿಂದ 94 ಶೇಕಡಾ ಹೆಚ್ಚಳ ಕಂಡಿದೆಯೆನ್ನಲಾಗಿದೆ.

## 54 ಮಿಲಿಯನ್ ಟನ್‌ಗೇರಿದ ಭತ್ತ ಖರೀದಿ

2022-23 ನೇ ಸಾಲಿನ ಭಾರತದ ಭತ್ತ ಖರೀದಿ ಹಿಂದಿನ ವರ್ಷದ ಈ ಅವಧಿಯಲ್ಲಿದ್ದುದರಿಂದ 10 ಶೇಕಡಾ ಅಧಿಕವಾಗಿ 541.90 ಲಕ್ಷ ಟನ್‌ಗಳಿಗೇರಿದೆಯೆನ್ನಲಾಗಿದೆ. ಖಾರೀಫ್ ಸೀಸನ್‌ನ ಭತ್ತ ಉತ್ಪಾದನೆ ಹಿಂದಿನ ವರ್ಷಕ್ಕಿಂತ 6 ಶೇಕಡಾ ಇಳಿಕೆಯಾಗಿ 104.99 ಮಿಲಿಯನ್ ಟನ್ ಗಳಾಗಬಹುದೆಂದು ಸರಕಾರ ಅಂದಾಜಿಸಿದೆಯೆನ್ನಲಾಗಿದೆ.

## ಆಗ್ರಾ ಮಾರುಕಟ್ಟೆಯಲ್ಲಿ ಆಲೂಗಡ್ಡೆ ದರ 3 ವರ್ಷಗಳ ಕನಿಷ್ಠ ಮಟ್ಟಕ್ಕೆ

ಕರೋನಾ ನಂತರ ಈ ವರ್ಷ ಹೊಸ ಆಲೂಗಡ್ಡೆ ಆವಕದ ನಂತರ ಆಗ್ರಾ ಮಾರುಕಟ್ಟೆಯಲ್ಲಿ ಆಲೂಗಡ್ಡೆ ದರ ಹಿಂದಿನ 3 ವರ್ಷಗಳಲ್ಲೇ ಅತಿ ಕನಿಷ್ಠ ಮಟ್ಟಕ್ಕೇ ಇಳಿಕೆ ಆಗಿದೆಯೆನ್ನಲಾಗಿದ್ದು, ಕೆ,ಜಿ ಗೆ ರೂ 10. ದರ ವಿದೆಯೆನ್ನಲಾಗಿದೆ. ಕುರುಕ್ಷೇತ್ರ, ಕರ್ನಾಲ್ ಮಂಡಿಗಳಲ್ಲಿ ದರ ಕ್ವಿಂ. ಗೆ ರೂ 400-500 ಇದೆಯೆನ್ನಲಾಗಿದೆ